**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :688/2021**
**ಚಾಸಾ :- 0 / ಪ್ರಾಸಾ :- 04**

| | |
|---|---|
| ಹೆಸರು | **ಮಂಜುನಾಥ** |
| ತಂದೆಯ ಹೆಸರು | ಸಿದ್ದಗಂಗಪ್ಪ |
| ವಯಸ್ಸು | **36** |
| ಉದ್ಯೋಗ | **ವ್ಯಾಪಾರ** |
| ವಿಳಾಸ | **ಹುಣ್ಣಿಗೆರೆ** |

**ದಿನಾಂಕ: 31-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.18-08-2022 ರಂದು ಸಂಜೆ ಸುಮಾರು 4 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5 ರವರು ಹುಣ್ಣಿಗೆರೆ ಗ್ರಾಮದ ಮಾರಮ್ಮ ದೇವಸ್ಥಾನದ ಹತ್ತಿರ ಇದ್ದಾಗ, ಪ್ರಾಸಾ-1 ಮತ್ತು ಆರೋಪಿ ಜಮೀನಿನಲ್ಲಿ ಜಗಳವನ್ನು ಆಡುತ್ತಿದ್ದರು. ನಾನು ಮತ್ತು ಚಾಸಾ-5 ರವರು ಹೋಗಿ ಜಗಳವನ್ನು ಬಿಡಿಸಿದೆವು. ಆರೋಪಿಯು ಪ್ರಾಸಾ-1 ರವರಿಗೆ ಕಲ್ಲಿನಿಂದ ಹೊಡೆದಿರುವ ಬಗ್ಗೆ ತಿಳಿದುಕೊಂಡೆವು. ನಂತರ ನಾವು ಪ್ರಾಸಾ-1 ರವರನ್ನು ಅಮ್ಮಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು. ಆರೋಪಿ ಮತ್ತು ಪ್ರಾಸಾ-1 ರವರ ನಡುವೆ ಜಮೀನಿನ ಅಳತೆಯನ್ನು ಮಾಡಿಸುವ ವಿಚಾರಕ್ಕೆ ಜಗಳವಾಗಿರುತ್ತದೆ. ಆರೋಪಿಯು ಪ್ರಾಸಾ-1 ರವರಿಗೆ ದೊಣ್ಣೆಯಿಂದ ಮೈ ಕೈಗೆ ಹೊಡೆದಿರುವ ಬಗ್ಗೆ ತಿಳಿದುಕೊಂಡೆವು. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಆರೋಪಿಯು ಪ್ರಾಸಾ-1 ರವರನ್ನು ಅಡ್ಡಗಟ್ಟಿ ಬಾಯಿಗೆ ಬಂದಂತೆ ಬೈದರು ಎಂಬ ವಿಷಯವನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಆರೋಪಿಯು ಪ್ರಾಸಾ-1 ರವರಿಗೆ ಕೋಲಿನಿಂದ ಹೊಡೆದಿರುವುದಿಲ್ಲ ಮತ್ತು ಕಲ್ಲಿನಿಂದ ಹಲ್ಲೆ ಮಾಡಿ, ಕೈ ಮತ್ತು ಕಾಲುಗಳಿಂದ ಪ್ರಾಸಾ-1 ರವರಿಗೆ ಹೊಡೆದಿದ್ದಾರೆ ಎಂಬ ವಿಷಯವನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಆರೋಪಿಯು ಪ್ರಾಸಾ-1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿರುವ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಸದರಿ ವಿಷಯದ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

**ಪಾಟೀ ಸವಾಲು ಃ- ಆರೋಪಿ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದ ಃ-**

ಪ್ರಾಸಾ-1 ರವರ ತಮ್ಮನಾದ ಮಂಜುನಾಥ ರವರು ನಮ್ಮ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ಸದರಿ ವ್ಯಕ್ತಿಯ ಕ್ರಷರ್ ಮತ್ತು ಲಾರಿಯನ್ನು ಇಟ್ಟುಕೊಂಡಿರುತ್ತಾರೆ ಮತ್ತು ನಾನು ಅವರ ಬಳಿ ರೈಟರ್ ಆಗಿ ಕೆಲಸವನ್ನು ಮಾಡುತ್ತಿದ್ದೇನೆ ಎಂದರೆ ಸರಿ. ಆರೋಪಿ ಮತ್ತು ಪ್ರಾಸಾ-1 ರವರ ಕುಟುಂಬದವರ ಜಮೀನಿಗೆ ಸಂಬಂಧಿಸಿದಂತೆ ಮಾಗಡಿಯ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಪ್ರಾಸಾ-1 ರವರು ಅಣ್ಣ ತಮ್ಮಂದಿರು ಎಂದರೆ ಸರಿ.

ಸಾಕ್ಷಿಯು ಮುಂದುವರೆದು ಆರೋಪಿಯ ತಂದೆ ಮತ್ತು ಪ್ರಾಸಾ-1 ರವರ ತಂದೆ



ಅಣ್ಣ ತಮ್ಮಂದಿರು ಎಂದು ನುಡಿದಿರುತ್ತಾರೆ.

ಸದರಿ ಘಟನೆ ಆದ ಅರ್ಧ ಗಂಟೆಗಳ ಬಳಿಕ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಕೃತ್ಯ ನಡೆದ ಸ್ಥಳಕ್ಕೆ ಅರ್ಧ ಗಂಟೆಯ ನಂತರ ಹೋಗಿದ್ದೇನೆ ಎಂದು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯು ಪ್ರಾಸಾ-1 ರವರಿಗೆ ಹೊಡೆದಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಊರು ಮರಿ ಒಡೆಯರಯ್ಯನ ಪಾಳ್ಯ ಎಂದರೆ ಸರಿ. ನಾನು ನಮ್ಮ ಊರಿನಿಂದ ಹುಣ್ಣಿಗೆರೆ ಗ್ರಾಮಕ್ಕೆ ಯಾವ ಕಾರಣಕ್ಕಾಗಿ ಬಂದಿದ್ದೆ ಎಂದು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಘಟನೆಯು ಸಂಜೆ 4 ಗಂಟೆಯಿಂದ 4.30 ರವರೆಗೆ ನಡೆದಿದೆ. ಸದರಿ ಘಟನೆ ನಡೆಯುವಾಗ ನಾನು ಮತ್ತು ಚಾಸಾ-5 ರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಜನರು ಓಡಾಡುತ್ತಾರೆ ಎಂದರೆ ಸರಿ. ಆರೋಪಿಯು ಪ್ರಾಸಾ-1 ರವರಿಗೆ ಹೊಡೆದಿರುವ ಬಗ್ಗೆ ನನಗೆ ಪ್ರಾಸಾ-1 ರವರೇ ಹೇಳಿದರು. ಪ್ರಾಸಾ-1 ರವರು ಸದರಿ ವಿಷಯದ ಬಗ್ಗೆ ನನಗೆ ಯಾವ ಸಮಯದಲ್ಲಿ ಹೇಳಿದರು ಎಂದು ನೆನಪಿಲ್ಲ.

ಪ್ರಾಸಾ-1 ರವರ ತಲೆಗೆ ಏಟಾಗಿರುತ್ತದೆ. ಪ್ರಾಸಾ-1 ರವರನ್ನು ನಾನು ನೋಡಿದಾಗ ಅವರಿಗೆ ಪ್ರಜ್ಞೆ ಇತ್ತು. ಪ್ರಾಸಾ-1 ರವರನ್ನು ಚಾಸಾ-5 ರವರ ಬ್ರೀಜಾ ಕಾರನಲ್ಲಿ ಕರೆದುಕೊಂಡು ಆಸ್ಪತ್ರೆಗೆ ಹೋದೆವು. ಸದರಿ ವಿಷಯದ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಪ್ರಾಸಾ-1 ರವರನ್ನು 5 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಹುಣ್ಣಿಗೆರೆ ಗ್ರಾಮದಿಂದ ಚಂದ್ರಪ್ಪ ಸರ್ಕಲ್ ಗೆ ಒಂದುವರೆ ಕಿ.ಮೀ. ನಷ್ಟು ಅಂತರವಿದೆ.

ಹುಣ್ಣಿಗೆರೆ ಗ್ರಾಮದಿಂದ ತಾವರೆಕೆರೆಗೆ 6 ಕಿ. ಮೀ. ನಷ್ಟು ಅಂತರವಿದೆ. ಚಂದ್ರಪ್ಪ ಸರ್ಕಲ್ ನಲ್ಲಿ ಸರ್ಕಾರಿ ಆಸ್ಪತ್ರೆ ಮತ್ತು ಪ್ರೈವೇಟ್ ಕ್ಲಿನಿಕ್ ಗಳು ಇದೆ ಎಂದರೆ ಸರಿ. ಸಾಮಾನ್ಯವಾಗಿ ಸಣ್ಣ ಪುಟ್ಟದಾಗಿ ಏಟಾಗಿದ್ದಾಗ ಚಂದ್ರಪ್ಪ ಸರ್ಕಲ್ ನಲ್ಲಿ



ಇರುವ ಆಸ್ಪತ್ರೆಗೆ ಹೋಗುತ್ತೇವೆ ಎಂದರೆ ಸರಿ. ಆರೋಪಿಯು ಪ್ರಾಸಾ-1 ರವರಿಗೆ ಹೊಡೆದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಬೈದಿಲ್ಲ, ನಾನು ಪ್ರಾಸಾ-1 ರವರ ತಮ್ಮನ ಬಳಿ ರೈಟರ್ ಆಗಿ ಕೆಲಸ ಮಾಡುವ ಕಾರಣದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-1 ರವರು ರಾತ್ರಿ 8 ಗಂಟೆಯವರೆಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆಯನ್ನು ಪಡೆದುಕೊಂಡರು. ಸದರಿ ವಿಷಯದ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**